# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ಸದಸ್ಯರ ಹೆಸರು: ಶ್ರೀ ಶಾಂತಾರಾಮ ಸಿದ್ದಿ

## ದಿನಾಂಕ:17.12.2025ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ

**ವಿಷಯ**:

ವಿಕಲಚೇತನರಿಗೆ ಆದಾಯ ಮಿತಿ ರದ್ದು ಮಾಡಿ ಮಾಸಾಶನ ಹೆಚ್ಚಿಸಲು ಮನವಿ ಎಂಬ ಶೀರ್ಷಿಕೆಯಡಿ ಕನ್ನಡ ಜನಾಂತರಂಗ ಪತ್ರಿಕೆಯಲ್ಲಿ ಉಲ್ಲೇಖವಾಗಿರುವ ಕೆಲವು ಅಂಶಗಳನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ವಿಕಲಚೇತನರಿಗೆ ಸರ್ಕಾರದಿಂದ ಸೌಲಭ್ಯ ಪಡೆಯಲು ಆದಾಯ ಮಿತಿ ತೆಗೆಯುವುದು ಹಾಗೂ ಮಾಸಾಶನ ಹೆಚ್ಚಿಸುವಂತೆ ಶಿರಸಿ ಪ್ರಶಾಂತಿ ಫೌಂಡೇಶನ್ ಅಧ್ಯಕ್ಷ ಡಾ. ಗಿರಿಧರ ಸರ್ಕಾರವನ್ನು ಆಗ್ರಹಿಸಿ ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿರುವ ಅವರು, ಸರ್ಕಾರ ವಿಕಲಚೇತನರ ಜೀವನ ಸುಧಾರಿಸಲು ಮಾಸಾಶನ ಕೊಡುತ್ತಿದೆ. ಅದನ್ನು ಪಡೆಯಲು ವೈದ್ಯಕೀಯ ಪ್ರಮಾಣಪತ್ರ ನೀಡಬೇಕು. ವಿಕಲಚೇತನ ಪ್ರಮಾಣ ಶೇ.74 ಕ್ಕಿಂತ ಜಾಸ್ತಿ ಇದ್ದರೆ 1,400 ರೂ. ಹಾಗೂ ಶೇ 40ಕ್ಕಿಂತ ಜಾಸ್ತಿ ಇದ್ದರೆ 800 ರೂ ನೀಡಲಾಗುತ್ತದೆ. ಇದನ್ನು ಪಡೆಯುವ ವಾರ್ಷಿಕ ಕುಟುಂಬದ ಆದಾಯ 32,000ರೂ ಎಂಬುದಾಗಿದೆ. ಅಷ್ಟು ಕಡಿಮೆ ಆದಾಯ ಇದ್ದರೆ ಜೀವನ ನಡೆಸಲು ಸಾಧ್ಯವಿಲ್ಲ. ಮತ್ತು ಆದಾಯ ಪ್ರಮಾಣಪತ್ರ ಇಲ್ಲದೇ ಮಾಸಾಶನ ದೊರೆಯುವುದಿಲ್ಲ.

ಇದರಿಂದಾಗಿ ವಿಕಲಚೇತನರಿಗೆ ಮಾಸಾಶನವೂ ಇಲ್ಲದೇ, ದುಡಿಯಲು ಆಗದೇ ಅತಂತ್ರರಾಗಿದ್ದಾರೆ. ಅವರ ಜೀವನದ ಹಿತದೃಷ್ಟಿಯಿಂದ ಆದಾಯ ಮಿತಿ ತೆಗೆಯಬೇಕು ಮತ್ತು ಮಾಸಾಶನ ಮೊತ್ತ ಏರಿಸಬೇಕೆಂದು ಆಗ್ರಹಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಹೀಗಾಗಿ ಸಾರ್ವಜನಿಕ ಮಹತ್ವದ ಸದರಿ ವಿಷಯವನ್ನು ಮಾನ್ಯ ಮಹಿಳಾ & ಮಕ್ಕಳ ಅಭಿವೃದ್ಧಿ, ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಗಂಭೀರವಾಗಿ ಪರಿಗಣಿಸಿ ಆದ್ಯತೆಯ ಮೇರೆಗೆ ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ**

ರಾಜ್ಯದಲ್ಲಿ ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಪಿಂಚಣಿ ಮಂಜೂರಾತಿ ಮಾನದಂಡಗಳನ್ವಯ ಈ ಕೆಳಗಿನಂತೆ ಅಂಗವಿಕಲ ಮಾಸಿಕ ಪಿಂಚಣಿಯನ್ನು ವಿತರಿಸಲಾಗುತ್ತಿದೆ.

| ಕ್ರಮ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ ದಿನಾಂಕ | ಶೇಕಡವಾರು ಅಂಗವಿಕಲತೆ ವಿಧ | ಮಾಸಿಕ ಪಿಂಚಣಿ ಮೊತ್ತ |
|---|---|---|---|
| 1 | ಕಂಇ 39 ಎಂ.ಎಸ್.ಟಿ 2021 ದಿನಾಂಕ:31.07.2021 | ಶೇ. 40 ರಿಂದ 74 ರಷ್ಟು ಅಂಗವಿಕಲತೆ (PHP-1) | ರೂ.800/- |
| 2 | ಆರ್.ಡಿ 47 ಡಿ.ಎಸ್.ಪಿ 2018 ದಿನಾಂಕ:16.03.2018 | ಶೇ. 75ಕ್ಕಿಂತ ಹೆಚ್ಚಿನ ಅಂಗಕಲತೆ (PHP-2) | ರೂ.1,400/- |
| 3 | ಡಿ.ಎಸ್. ಎಸ್.ಪಿ/ ಎಸ್. ಎಸ್.ಪಿ/ಪಿ.ಹೆಚ್.ಪಿ/5/2021 ದಿನಾಂಕ:07.12.2021 | ಶೇ. 75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ (PHP-3) | ರೂ.2,000/- |

. . . 2

ವಿಕಲಚೇತನರಿಗೆ ನೀಡುತ್ತಿರುವ ಮಾಸಿಕ ಪಿಂಚಣಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಬಿ.ಪಿ.ಎಲ್. ಪಡಿತರ ಚೀಟಿ ಪಡೆಯಲು ಆದಾಯ ಮಿತಿಯನ್ನು ರೂ.1.20 ಲಕ್ಷಗಳಿಗೆ ಹೆಚ್ಚಿಸಲಾಗಿರುವ ವಿಷಯವನ್ನು ದಿನಾಂಕ: 25-11-2020 ರಂದು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಸರ್ಕಾರದಿಂದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ನೈಜ ಹಾಗೂ ವಸ್ತು ನಿಷ್ಠ ಸ್ವರೂಪವನ್ನಾಗಿಸುವಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಆದಾಯ ಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಡಿಎಸ್‌ಎಸ್‌ಪಿ/ಎಂಐಎಸ್‌ಸಿ-05/2020, ದಿ:10-02-2021ರಲ್ಲಿ ರೂ.32,000/-ಗಳಿಗೆ ನಿಗದಿಪಡಿಸಲಾಗಿದೆ. ಅದರಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹ ಫಲಾನುಭವಿಗಳಿಂದ ಪಿಂಚಣಿಗೆ ಅರ್ಜಿ ಪಡೆಯಲು ಕ್ರಮವಹಿಸಲಾಗುತ್ತಿದೆ.

ಕಡತ ಸಂಖ್ಯೆ:ಕಂಇ/192/ಕೆ.ಎ.ಟಿ./ಎಸ್.ಎಸ್.ಪಿ/2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು